Sri Vani Vijaya Higher Secondary School Kodlamogaru
P.O Kodlamogaru, Manjeshwara Sub District, Kasaragod




# School Magazine 2023-24

# ಸ್ನೇಹಿತ

ಸ್ನೇಹಿತ ನಿಲ್ಲದ  ಬದುಕು
ಸಿಹೀ ಇಲ್ಲದ ಸ್ವೀಟು
ಸ್ನೇಹಿತರೋಂದಿಗೆ ಕಳೆದ  ಮಧುರ ಕ್ಷಣಗಳು
ಮರೆಯಲಾಗದು ಕಳೆದರು ವರುಷಗಳು
ಚಿಕ್ಕವರಿದ್ದಾಗ ಮಾಡಿದ ತುಂಟಾಟಗಳು
ವಯಸ್ಸಿನಲ್ಲಿ ಚಿಕ್ಕಪುಟ್ಟ ವಿಷಯಗಳಿಗೆ
ಮಾಡಿದ ವಾದಗಳು
ಕಷ್ಟದಲ್ಲಿ ಮಾಡಿದ ಸಹಾಯ
ಸಂತೋಷದಲ್ಲಿ ಭಾಗಿಯಾಗುವಸ್ನೇಹಿತ
ನಂಬಿಕೆಗೆ ನಂಬಿಕಸ್ತ ಈ ನನ್ನ ಸ್ನೇಹಿತ
ನಮ್ಮ ಸ್ನೇಹತನಕ್ಕೆ ಸಾಕ್ಷಿ ಈ ನಮ್ಮ ಸ್ನೆಹ
ಸಂಬಂಧ

Chethan
9D

# ಗೆಳೆಯ

ಗೆಳೆಯನಿಲ್ಲದ  ಬದುಕು
ಸಿಹೀ ಇಲ್ಲದ ಸ್ವೀಟು
ಗೆಳೆಯರೋಂದಿಗೆ ಕಳೆದ  ಮಧುರ ಕ್ಷಣಗಳು
ಮರೆಯಲಾಗದು ಕಳೆದರು ವರುಷಗಳು
ಚಿಕ್ಕವರಿದ್ದಾಗ ಮಾಡಿದ ತುಂಟಾಟಗಳು
ವಯಸ್ಸಿನಲ್ಲಿ ಚಿಕ್ಕಪುಟ್ಟ ವಿಷಯಗಳಿಗೆ ಮಾಡಿದ ವಾದಗಳು
ಕಷ್ಟದಲ್ಲಿ ಮಾಡಿದ ಸಹಾಯ
ಸಂತೋಷದಲ್ಲಿ ಭಾಗಿಯಾಗುವಗೆಳೆಯ
ನಂಬಿಕೆಗೆ ನಂಬಿಕಸ್ತ ಈ ನನ್ನ ಗೆಳೆಯ
ನಮ್ಮ ಗೆಳೆತನಕ್ಕೆ ಸಾಕ್ಷಿ ಈ ನಮ್ಮ ಸ್ನೆಹ ಸಂಬಂಧ

Sharal Reesha D Souza
9D

ಗೆಳೆಯ

ಗೆಳೆಯನಿಲ್ಲದ ಬದುಕು
ಬಣ್ಣವಿಲ್ಲದ ಮಿನುಗು
ಎರಡಕ್ಕು ಬೆಳೆಯಿಲ್ಲವೂ
ವರ್ತಮಾನದಿ ಬದುಕು

ಹೇಗೆ ಚಿನ್ನಕ್ಕಕಾರವಿದ್ದರೆ ಚಂದ
ಹಾಗೆ ಬದುಕಲಿ ಗೆಳೆಯನಿದ್ದರೆ ಚಂದ
ಬಲವಿಲ್ಲದಾನೆಯು
ಛಲವಿಲ್ಲದ ನರಿಯು
ಏನು ಮಾಡಿದರೇನು ಲಾಭ
ಛಲ ಬಲಕ್ಕೆ  ಮೆರೆಯುವ
ಗೆಳೆಯನೋಬ್ಬನಿದ್ದರೆ  ಸಾಕು
ಸರ್ವಕ್ಕು ಅವನೆ ಬೇಕು

ಗೆ ಎಂದರೆ ಗೆಲುವು
ಳೆ ಎಂದರೆ ಲಗನ
ಯ ಎಂದರೆ ಯಾವಾಗಲು ಎಂದರ್ಥವೋ
ಗೆಳೆಯನೆ ಸರ್ವಸ್ವವು ಎನಬೇಕು

Vathsal
9D

# ಅಮ್ಮ

ಅಮ್ಮ ಎಂಬ ಜೀವ
ಕರುಣೆಯೊಂದೆ ಭಾವ
ತಾಯಿ ಎನ್ನುವ ನಾಮ
ಮಗುವಿಗದುವೆ ಧಾಮ

ಕಣ್ಣ ಕಾಯೋ ರೆಪ್ಪೆಯಾಗಿ

ಸಮಯಕ್ಕೆ ಸರಿಯಾಗಿ
ಎನೇ ಅದರು,ಎನೇ ಬಂದರು
ಮಕ್ಕಳ ಕೊರಳಿಗವಳೇ ಧನಿಯಾಗುವಳು

ಅ ಎಂಬ ಅಕ್ಷರದಿ ಅಕ್ಕರೆ ಎಂದರ್ಥ
ಮ್ಮ ಎಂಬ ಅಕ್ಷರದಿ ಮುದ್ದಿಸು ಎಂದರ್ಥ
ತನಗಿಲ್ಲದೂಟವನು ಮಗುವಿಗಿಟ್ಟು
ಕಣ್ಣೀರ ಸುರಿಸದೇ ಹಳೆಯದನು ಉಟ್ಟು

ಮನೆಗವಳೆ ಯಜಮಾನ್ತಿ
ಮನೆಗವಳೆ ಕೆಲಸಗಾರ್ತಿ
ಬೇಡ ಅವಳಿಗೆ ದೊಡ್ಡ ಕೀರ್ತಿ
ಮಗುವಿಗೆಂದೆ ಅವಳು ಜೀವನ ಪೂರ್ತಿ

ಅಮ್ಮ ಎಂಬ ದೇವರು
ಕಣ್ಣ ಮುಂದೆ ಇರುವರು
ಬೇರೆ ಯಾರು ಇಲ್ಲವೊ
ಬೇರೆ ಯಾರು ಕಾಣರೋ

* *

ಚರಣ್ ರಾಜ್ 9ಎ

# ವಸಂತ

ಮಳೆಗಾಲದೊಂದು  ಮುಂಜಾವಿನಲಿ
ಮಂಜಿನಿಂದಾಗಿ  ಮಬ್ಬಾದ
ಬೆಳಗಿನಂತೆ
ಕೆಲವೊಮ್ಮೆ ನನ್ನ ಕನಸುಗಳೂ
ಮಬ್ಬಾಗುವುದುಂಟು .
ದಾರಿ ಅಸ್ಪಷ್ಟವಾಗುವುದುಂಟು .
ಬೆಳೆಕು ಪ್ರಖರವಾದಂತೆಲ್ಲ
ಕನಸುಗಳೂ ಕರಗುವುವು .

ಪೂರ್ತಿಕರಗುವ ಮುನ್ನ
ಅವುಗಳ ಹಿಡಿಯಲೆತ್ತಿಸುವೆ.
ಜೇಡಿ ಮಣ್ಣಿನೊಡನಾಡುವ
ಕುಂಬಾರನೂಲು
ನನ್ನ ಕನಸುಗಳೊಡನೆ ರಮಿಸುವೆ.
ಆದರೂ ಕನಸುಗಳು ವಾಸ್ತವವಾಗುವುದು ಅಸಂಭವವೆ.
ಹೃದಯ
ಬಣ್ಣಗಳಿಗಾಶಿಸುವುದಾದರು
ಮನಸ್ಸು ನಿರ್ವರ್ಣವೆ!
ಮತ್ತೊಂದು ದಿನಕ್ಕಾಗಿ ಪ್ರಾರ್ಥಿಸುತ್ತಾ ನಿದ್ದೆ ಹೋಗುವೆ.
ಕನಸುಗಳು ಬಂದು ಕಾಡುವುವು,ಕೆಲವು ಉದ್ದೇಶಿತವಾದರೆ
ಕೆಲವು ನೋವು ಕೊಡುವವು.
ವರ್ಷಗಳು ಕಳೆದರೂ
ಕನಸುಗಳು ಹಿಂದಿರುಗಿ
ಬರುತ್ತಲೇ ಇವೆ.

ಪ್ರಿಯಾಂಕ .ಯಮ್ 9A

# ಮನಸಿನ ಮಾತು

ಕಣ್ಣಲ್ಲಿ ಕೋಪ ಇದ್ರೆ
ಮನಸ್ಸಲ್ಲಿ ಪ್ರೀತಿ ಇರುತ್ತೆ
ಮುಖದಲ್ಲಿ ಮೌನ ಇದ್ರೆ
ಹೃದಯದಲ್ಲಿ ಆಸೆ ಇರುತ್ತದೆ
ಮಾತಲ್ಲಿ ಬೇಸರ ಇದ್ರೆ
ಉಸಿರಲ್ಲಿ ಪ್ರೀತ್ಸೋರ
ಹೆಸರುಇರುತ್ತೆ....

shihan 9th c

# ಅಮ್ಮ

ನನ್ನೊಳವಿನ ಜೀವ ಅಮ್ಮ
ಶಿರಭಾಗುವೆ ನಿನಗಾಗೀ
ಆ ಪಾದದಿ ಅಡಗಿದ ಸ್ವರ್ಗ
ಜಗ ಕಂಡಿದೆ ಉಸಿರಾಗಿ
ಕಣ್ಣು ನಿನ ವಕ್ಷಣೆ ನನಗೆ ಅವಳೇ ಸಂದನಾ
ಸೋಲು ಗೆಲುವಲೂ ನೀನೆ ಜೀವನ
ನನ್ನೊಳವಿನ ಜೀವ ಅಮ್ಮ
ಶಿರಭಾಗುವೆ ನಿನಗಾಗೀ
ಆ ಪಾದದಿ ಅಡಗಿದ ಸ್ವರ್ಗ
ಜಗ ಕಂಡಿದೆ ಉಸಿರಾಗೀ

FARHEENA 9C

ಕವಿತೆ

ಉದಾತ್ತ ಚಿಂತನೆ ಅಡಗಿದೆ ನಿನ್ನಲ್ಲಿ
ನೀನು ಯಾಕೆ ಇಡಬಾರದು ಕವಿತೆಗೆ ಮುನ್ನುಡಿ....
ಬರೆ ಕವಿತೆಯ ಸಾಲುಗಳ ಮನಮಾಡಿ
ನವನವೀನ ಶಬ್ದ ಭಂಡಾರದ ಕೈಹೀಡಿ ....
ಓದಿದರೆ ಆಗುವುದು ಜ್ಞಾನವು ಇಮ್ಮಡಿ

ನೂರಾರು ಭಾವನೆಗಳ ಭಾವಗಳು ಅಡಗಿವೆ ಇದರಲ್ಲಿ
ಪೋಣಿಸು ಅಕ್ಷರಗಳ ಮುತ್ತನ್ನು ಸರಿಯಾದ ರೀತಿಯಲ್ಲಿ....

ಹಿರಿಯ ಕಿರಿಯರೆಲ್ಲರೂ ಓದುವರು ಕವಿತೆಯನು ಖುಷಿಯಲ್ಲಿ
ನೋವು ನಲಿವುಗಳ ವಿಷಯಗಳು ಅಡಕವಾಗಿದೆ ಇದರಲ್ಲಿ....
ಹಲವು ಬಾಷೆ ಸಂಸ್ರ್ಕತಿಗಳು ಅಡಗಿವೆ ಇಂತಹ
ಕವಿತೆಯಲ್ಲಿ
ಈ ಕವಿತೆಯನ್ನು ಕೊನೆಗೊಳಿಸಲು ಹೋಗುತೀದ್ದೆನೆ ನಾನಿಲ್ಲಿ....

Latha
9d

## ಸಂಭ್ರಮದಿಭಾರತಾಂಭೆ

ವೀರಾದಿ ವೀರರು ಮೆಟ್ಟದ ನಾಡು
ಪುಣ್ಯ ನದಿಗಳು ಹರಿಯುವ  ಬೀಡು
ರಾಜಾದಿ ರಾಜರು  ಆಳಿದ ಧರೆಯು
ಪ್ರಕೃತಿ ಮಾತೆಯ ಸೊಬಗಿನ ಸೆಳಯು

ಬಂದಿತು ದೇಶಕೆ ಬ್ರಿಟಿಷರ ರಗಳೆ
ಮೊಳಗಿತು ದೇಶದಿ ಕ್ರಾಂತಿಯ ಕಹಳೆ
ವ್ಯಥ್ ವಾಗದ ಈ ತ್ಯಾಗ ಬಲಿದಾನ
ನೀಡಿತು ನಮಗೆ ಸ್ವಾತಂತ್ರ್ಯ ದಿನ

ಕವಿಗಳ ಲೇಖನಿ ಆಯಿತು ಹರಿತ
ದೇಶದಿ ಆಯಿತು ಸ್ವಾತಂತ್ರ್ಯ ಚರಿತ
ದೇಶದ ಜನರಿಗೆ ನೀಡಿತು ಪುಳಕ
ವಿದೇಶಿ ಶಕ್ತಿಗೆ ಆಯಿತು ನಡುಕ

ಅರಳಿತು ದೇಶದಿ ತ್ರಿವಣ ಧ್ವಜವು
ಜನರಿಗೆ ಆಯಿತು ಸಂತೃಪ್ತ ಮನವು
ದೇಶಕೆ ಇದುವೇ ಮಹಾ ಉತ್ಸವವು
ಅದುವೇ ನಮ್ಮ ಸ್ವಾತಂತ್ರ್ಯ ಸಂಭ್ರಮವು

Vaishnavi H Shetty
9D

# ಪ್ರಕೃತಿ

ಪ್ರಕೃತಿ ಸಂರಕ್ಷಿಸಿ ಉಳಿಸೋಣ ಜೀವನ
ಪ್ಲಾಸ್ಟಿಕ್ ಮಾಲ್ಯಿನದ ಮುಂದೆ
ಹೋರಾಡಿ ಉಳಿಸೋಣ ಜೀವನ
ಇರಲಿ ಪ್ರಕೃತಿ ಮೇಲೆ ಪ್ರೀತಿ
ಪ್ರಕೃತಿ ಕೊಡುವಲು ನಮಗೆ ನೀತಿ
ಬೆಳೆಸೋಣ ಗಿಡಮರಗಳನ್ನು
ಗಿಡಮರಗಳು ಉಳಿಸುವವು ನಮ್ಮನ್ನು
ಪ್ರಕೃತಿ ಇಲ್ಲದೆ ಜೀವನವಿಲ್ಲ
ಹಾಗಿದ್ದಲ್ಲಿ ನಮಗೇನು ಹಕ್ಕು
ಪ್ರಕೃತಿ ನಾಶದ್ದಲ್ಲಿ

ಭುವನ್ 9ಎ

# <u>ಅಮ್ಮನ ಅಂದ</u>

ಹುಟ್ಟಿದಾಗ ಮೂದಲನೆಯ ಕೂಡುಗೆ ಅಮ್ಮ
ಅಮ್ಮ ಅಂದ ನನಗೆ ಬಲು ಚಂದ
ಅವಳ ಬೊಟ್ಟು  ಮಾಣಿಕ್ಯ ದಂತೆ ಅಂತ
ಪುಷ್ಯರಾಗ ಅವಳ ವೂಗತಿಗೆ ಚೆಂದ
ಅವಳ ಓಲೆ ಗೋಮೋದಕದಂತೆ ಅಂದ
ಹವಳ ಅವಳ  ತಾಳಿಗೆ ಚೆಂದ
ಅವಳ ಬಳೆ ಮರಕತದಂತೆ ಅಂದ
ನೀಲ ಅವಳ ಉಂಗುರಕೆ ಚೆಂದ
ಅವಳ ನಗುವು ಮುತ್ತಿಗೆ ಅಂದ
ವಜ್ರದ ಹಾರ ಅವಳ ಕೊರಳಿಗೆ ಚೆಂದ
ಅವಳ ಪ್ರೀತಿ ವೈಡೋರ್ಯದಂತೆ ಅಂದ
ನನಗೆ ಅದು  ಬಲು ಚೆಂದ
ಹೆಣ್ಣಿಗೆ ನವರತಗಳೇ ಅಂದ
ನನಗೆ ನನ್ನ ತಾಯಿಯೇ ಚೆಂದ.

NAFEESATH MISRIYA
9TH E

ಅಮ್ಮ

ಹುಟ್ಟುವಾಗ ''ಅಮ್ಮ'
ಅಳುವಾಗ ''ಅಮ್ಮ'
ನಗುವಾಗ ''ಅಮ್ಮ'
ಬಿದ್ದಾಗ ''ಅಮ್ಮ'
ನಾವು ಯೆಲ್ಲಿದ್ದರು ಯಾವಾಗ ಜೊತೆಗೆ ಇರುತ್ತರೆ
''ಅಮ್ಮ'
ಕಾರಣ ಅವರಿಂದಲೇ ಸಿಕ್ಕಿದ ನಮಗೆ ಈ
''ಜನ್ಮ'

-ಸಾತ್ವಿಕ್ 9ಎ

# ತಾಯಿಯ ಮಮತೆ

ನನ್ನ ಮುದ್ದು ಕಂದಮ್ಮ ಯಾಕೀ ಅಳಲು
ನಿನಗೆ ನೋವಾದರೆ ಕಿತ್ತುಹೋಗುವುದು ನನ್ನ ಕರುಳು
ನಿನ್ನ ಅಲಂಕಾರಕ್ಕೆ ತಂದಿರುವೆ ಬಣ್ಣದ ಹೂಗಳು
ಮಗುವೇ ನಕ್ಕಿಬಿಡು ನಿನ್ನ ನಗುವೇ ಬೆಳದಿಂಗಳು

ನಿನ್ನ ನಗುವ ಕಂಡು ಸೋತು ಹೋದ ಆ ಚಂದಿರ
ಸೋತು ಬರಲಾರ ಎನ್ನುವ ನಿನ್ನ ಹತ್ತಿರ
ಮುರಿದುಬಿಟ್ಟೆ ಅವನೇ ಚಂದ ಎನ್ನುವ ಅವನ ಅಹಂಕಾರ
ನೀನೇ ಚಂದಿರನ ಗೆದ್ದ ನನ್ನ ರಾಜಕುಮಾರ

ನಿನ್ನ ಜೊತೆ ಇದ್ದರೆ ಮರೆತು ಹೋಗುತ್ತದೆ ಚಿಂತೆ
ಸಮಯ ಹೋದದ್ದೇ ತಿಳಿಯದು ಇದ್ದು ನಿನ್ನ ಜೊತೆ
ನಿನ್ನ ಭವಿಷ್ಯಕ್ಕಾಗಿ ಈಗಲೇ ಜೋಡಿಸಿಟ್ಟಿರುವೆ ಹಣದ ಕಂತೆ
ಎಂದು ಕೊನೆ ಕಾಣದು ತಾಯಿಯ ಈ ಮಮತೆ

Mohammed Noor
9A

# ಅಮ್ಮ

ಒಂಬತ್ತು ತಿಂಗಳು ಹೊಟ್ಟೆಯಲ್ಲಿ ಹೊತ್ತೆ ,
ನೋವಿನ ಖುಷಿಯಲಿ ನನ್ನನ್ನು ಹೆತ್ತೆ .
ನನ್ನನ್ನು ತಿದ್ದಿ ಸಲಹಿದಾತೆ ,ನೀನೇ
ನನ್ನಯ ನಿಜವಾದ ದೇವತೆ .

ನಿನ್ನಿಂದ ನಾ ಕಂಡೆ ಈ ಜಗವ,
ನಾ ಕಲಿತೆ ನಿನ್ನಿಂದ ಆ ನಗುವ.
ನೀನೊಂದು ರೀತಿಯ ಕನ್ನಡಿ ,
ನಿನ್ನ ಕುರಿತು ಬರೆಯಲು ಕಷ್ಟ ಮುನ್ನುಡಿ .

ನಾ ಜಾರಿದೊಡೆ ನಿನ್ನ ಕಣ್ಣಲ್ಲಿ ನೀರಹನಿ ,
ನಕ್ಕರೆ ನಾ ನಿನ್ನ ಬಾಯಲ್ಲಿ ಜೇನಹನಿ .
ನನ್ನ ನೋವಲಿ ನಿನ್ನ ನೋವು ಅಡಗಿದೆ ,
ನೀಡಿದೆ ಕಷ್ಟ ಅದನು ನಾ ಅರಿಯದೆ .

ಅಂದು ನೀ ನೀಡದಿದ್ದರೆ ಜನನ,
ನಾ ಬರೆಯುತ್ತಿರಲಿಲ್ಲ ಈ ಪುಟ್ಟ ಕವನ .
ನನ್ನ ಪ್ರತಿ ಹೆಜ್ಜೆಗು ನೀನೇ ದಾರಿ ,
ಇಲ್ಲದಿದ್ದರೆ ಜೀವನ ಬಲು ದುಬಾರಿ...

ಕುಮಾರಿ ಸುಚಿತ 9ಎ

# ಅಮ್ಮ

ಅಮ್ಮ ಅಮ್ಮ
ನೀ ನನ್ನ ಅಮ್ಮ
ನಿನ್ನ ಬಿಟ್ಟು ನನಗೆ ಏನಿಲ ಅಮ್ಮ
ಜಗವೆ ನಿನ್ನಲಿ ಕಂಡೇ ಅಮ್ಮ
ನಿನ್ನ ಮುಂದೆ ಸಮಯಾರಮ್ಮ
ಅಮ್ಮ ಓ ನನ್ನ ಅಮ್ಮ
ನನ್ನ ಈ ಉಸಿರು ನಿನ್ನದೆ ಅಮ್ಮ
ನಿನ್ನ ನೆರಳಗಿ ಎಂದೆದೆದು
ಜೋತೆಯಾಗಿ ಇರುವೆ ನಾನು
ಕಾಯುವೆನು ಎಂದೆದೆದು
ಅಮ್ಮ ನಿನನ್ನು ಕೊನೆ ಉಸಿರವರೆಗೂ
ಅಮ್ಮ ಅಮ್ಮ ನೀ ನನ್ನ ಅಮ್ಮ
ನಿನ್ನ ಬಿಟ್ಟು ನನಗೆ ಏನಿಲ್ಲ ಅಮ್ಮ
ನ ನಿನ್ನ ಮಗುವು ನೀ ನನ್ನ ನಗುವು

SWATHI
9D

# ಚಿಂತನೆ

ಕಳೆದು ಹೋದ ಘಟನೆಯು
ಮರಳಿ ಬರುವುದೆ ?

ಮುಗಿದು ಹೋದ ಸಮಯವು
ಮತ್ತೆ ಬರುವುದೆ ?

ಆಡಿ ಹೋದ ಮಾತುವು
ಹಿಂಪಡಿಯಲಾಗುವುದೆ ?

ಭೂತಕಾಲದ ಪಾಶದಲಿ ಸಿಲುಕಿ
ವರ್ತ ಮನದ ಸುಖವ ಮಕಿತು
ನಿರಾಶವಾದಿಗಳಾಗುವಿರೇ ?

ಭವಿಷ್ಯದ ಚಿಂತನೆಯೊಂದಿಗೆ ಬೆಳೆದು
ಮಾದರಿಯಾಗುವಿರೇ

# ಅಮ್ಮ

ನೀನು ನನ್ನ ಜೀವಕೆ ಉಸಿರು
ಕೊಟ್ಟ ದೇವತೆ
ನನಗೆ ಪ್ರೀತಿ ಸಹನೆಯಿಂದ
ಬದುಕಿನ ಪಾಠ ಕಲಿಸಿದ ಮಾತೆ
ಜಗತ್ತಿನಲ್ಲಿ ಬೇರೆ ಯಾರು
ಕೊಡಲಾರರು ತಾಯಿಯ ಮಮತೆ
ನೀ ಸದಾ ನಗುತ್ತಿದ್ದರೆ ಬರಲಾರದು
ನನಗೆ ಯಾವುದೇ ಕೊರತೆ
ಅಮ್ಮ ನಿನ್ನ ಪಾದಕೆ ಸಮರ್ಪಿಸುವೆ
ಈ ನನ್ನ ಪುಟ್ಟ ಕವಿತ.

# ಅಪಾರ್ಥ

ನಾ ಬೆಂಕಿಯಾದೆ
ದೀಪವಾಗಿ ನಿನ್ನ ಬಾಳ ಬೆಳಗಲು
ಜ್ವಾಲೆಯಾಗಿ ನಿನ್ನ ಸುಡಲೆಂದಲ್ಲ
ನಾ ಜಲವಾದೆ
ನೀರಾಗಿ ನಿನ್ನ ದಾಹ ತೀರಿಸಲು
ನೆಲೆಯಾಗಿ ನಿನ್ನ ಮುಳುಗಿಸಲೆಂದಲ್ಲ
ನಾ ಬುಮಿಯಾದೆ
ನಿನ್ನ ಹೊತ್ತು ಪೋಷಿಸಲೆಂದು
ಕಂಪಿಸಿ ಬಾಯ್ತೆರೆಂದು ನಿನ್ನ ನುಂಗಲೆಂದಲ್ಲ
ಇಂದು ನಾ ಕಂಬನಿ ಮಿಡಿಯುತ್ತಿರುವೆ
ನನ್ನ ಪ್ರೀತಿಯ ಅರಿವು ನಿನಗಾಗಲೇ ಇಲ್ಲವೆಂದು
ನೀ ನನ್ನಿಂದ ದೋರಾದೆ ಎಂದಲ .

ಸೂರ್ಯ ನ ಬೆಳಕು ತಾರೆಯ  ಹೊಳಪು
ಚಂದ್ರನ ತಂಪು ತಂದವಳು
ಮಡಿಲಿನ ಮಮತೆ,ಕರುಳಿನ ಕವಿತೆ
ಬದುಕಿಗೆ ಸಮತೆ ತಂದವಳು
ಕೈಯಲಿ ತುತ್ತು,ಕೆನ್ನೆಗೆ ಮುತ್ತು
ಲಾಲಿಯ ಹಾಡು ಹಾಡುವಳು
ಪ್ರೀತಿಯ ಸ್ಪರ್ಶ ನಗುವಲಿ ಹರ್ಷ
ಸ್ನೇಹದ ವರ್ಷ ಸುರಿಸುವಳು
ಯಾರಿವಳು ?ಯಾರಿವಳು ?
ನಮ್ಮಯ ನಲ್ಲೆಯ ತಾಯಿವಳು.

# ಚೆಂಡು ಹೂ

ಚೆಂಡು ಹೂವೇ ಚೆಂಡು ಹೂವೇ
ನೀನು ಒಂದು ಒಳ್ಳೆಯ ಹೂ
ನೀನು ರಾಷ್ರ್ಟಧ್ವಜದ ಬಣ್ಣವನ್ನು ಸೂಚಿಸ
ಕೇಸರಿ, ಬಿಳಿ, ಹಸಿರು
ನೀನು ಬಿಸಿಲಿಗೆ ಒಣಗಿ ಹೋಗುವುದಿಲ್ಲ
ಮಳೆಗೆ ಕೊಳೆಯುದಿಲ್ಲ
ನಿನ್ನ ಹಾಗೇ ನಾವು ಕೂಡ
ಧೈರ್ಯಶಾಲಿಯಾಗಿರಬೇಕು
ಹಲವಾರು ಬೆಂಕಿಗಳು ಉರಿಯುತ್ತಿದ್ದರು
ಎದುರಿನಲ್ಲಿ ಹೂವಾಗಿ
ಪರಿಮಳವನ್ನು ನೀಡಿ
ದೊಡ್ಡವರ ಸಹಾಯದಿಂದ
ಎದ್ದು ನಿಲ್ಲಬೇಕು
ನಿನ್ನ ಎಸಳುಗಳು
ಹಲವಾರು ಬಾಷೆಗಳನ್ನು ಸೂಚಿಸಿದೆ
ಚೆಂಡು ಹೂವೇ ಚೆಂಡು ಹೂವೇ
ನೀನು ಒಂದು ಒಳ್ಳೆಯ ಹೂ



ರಿಯಾ.ಯಸ್.ಯಸ್